# ಪಡ್ಡೆಹೈಕಳ ಟ್ರೆಂಡಿ ಹೇರ್‌ಸ್ಟೈಲ್

ತಮ್ಮ ಲುಕ್‌ಗೆ ಎಲ್ಲರೂ ಆಕರ್ಷಿತರಾಗಬೇಕು, ತಮ್ಮ ಹೇರ್‌ಸ್ಟೈಲ್‌ಗೆ ಎಲ್ಲರೂ ಫಿದಾ ಆಗಬೇಕು, ಹೊಗಳಬೇಕು ಎಂದು ಬಯಸುವವರು ಸಲೂನ್‌ನತ್ತ ಮುಖ ಮಾಡುವ ಪ್ರತಿ ಬಾರಿಯೂ ಟ್ರೆಂಡಿ ಲುಕ್ ಬಯಸುತ್ತಾರೆ.

**■ ಶಶಿಕುಮಾರ್ ಸಿ.**

ವಿಭಿನ್ನ ಹೇರ್‌ಸ್ಟೈಲ್ ಟ್ರೆಂಡ್ ಹೆಚ್ಚು ಚಾಲ್ತಿಯಲ್ಲಿರುವುದು ಪಡ್ಡೆಹೈಕಳ ಬಳಗದಲ್ಲೇ. 'ನೋಡುಗರ' ಕಣ್ಣಿಗೆ ವಿಭಿನ್ನವಾಗಿ ಕಾಣಬೇಕು ಎನ್ನುವ ಮನದಾಸೆಯೂ ಇದಕ್ಕೆ ಕಾರಣ. ವಾಸ್ತವವಾಗಿ 'ನೋಡುಗರ' ಬಯಕೆಯೂ ಅದೇ ಆಗಿರುತ್ತದೆ. ಕೊರೊನಾ ಕಾಲದಲ್ಲಿ ಬಹುತೇಕ ಕದ ಮುಚ್ಚಿಕೊಂಡಿದ್ದ ಪಾರ್ಲರ್, ಸ್ಪಾ, ಸಲೂನ್‌ಗಳು ಸದ್ಯ ಗರಿಗೆದರಿದ್ದು, ಹೇರ್‌ಸ್ಟೈಲ್‌ನಲ್ಲೀಗ ಹೊಸ ಹೊಸ ಪ್ರಯೋಗಗಳು ನಡೆದು ಪಡ್ಡೆಹೈಕಳ ತಲೆಗೂದಲ ಮೆರುಗು ಇನ್ನಷ್ಟು ರಂಗು ಪಡೆದುಕೊಂಡಿದೆ.

ಹೇರ್‌ಸ್ಟೈಲ್ ಆಯ್ಕೆಯು ಅವರವರ ಅಭಿರುಚಿಗೆ ಅನುಗುಣವಾಗಿ ರೂಪುಗೊಳ್ಳುತ್ತದೆ. ಪುರುಷರ ಹೇರ್‌ಸ್ಟೈಲ್ ಕ್ಲಾಸಿಕ್ ಆಗಿ ಕಾಣುತ್ತದೆ. ಅದು ಅವರು ಮಾಡಿಸಿಕೊಳ್ಳುವ ಕೇಶವಿನ್ಯಾಸದ ಮೇಲೆ ನಿರ್ಧರಿತವಾಗುತ್ತದೆ. ಸಾಧಾರಣ ಲುಕ್ ಬಯಸುವವರು ಕ್ಲಾಸಿಕ್‌ನತ್ತ ಮುಖ ಮಾಡಿದರೆ, ವಿಭಿನ್ನವಾಗಿ ಕಾಣಬಯಸುವವರು ಟ್ರೆಂಡಿ ಲುಕ್‌ನತ್ತ ವಾಲುತ್ತಾರೆ. ಹೇರ್‌ಸ್ಟೈಲ್ ಬಗ್ಗೆ ಕೆಲವರು ಯಾವುದೇ ಅಭಿರುಚಿ ಹೊಂದಿರುವುದಿಲ್ಲ. ತಿಂಗಳಿಗೊಮ್ಮೆ ಹೇರ್‌ಕಟ್ ಮಾಡಿಸಬೇಕೆನ್ನುವ ಕಾರಣಕ್ಕೆ ಸಲೂನ್‌ಗಳಿಗೆ ಹೋಗಿ ಸಾಧಾರಣ ಹೇರ್‌ಕಟ್ ಮಾಡಿಸಿ ಬರುವವರೂ ಇದ್ದಾರೆ. ಇದಕ್ಕೆ ಹಣವೂ ಹೆಚ್ಚು ಖರ್ಚಾಗದು. ಇದು ಡೀಸೆಂಟ್, ಕ್ಲಾಸಿಕ್ ಲುಕ್ ನೀಡುತ್ತದೆ. ಆದರೆ, ತಮ್ಮ ಲುಕ್‌ಗೆ ಎಲ್ಲರೂ ಆಕರ್ಷಿತರಾಗಬೇಕು, ತಮ್ಮ ಹೇರ್‌ಸ್ಟೈಲ್‌ಗೆ ಎಲ್ಲರೂ ಫಿದಾ ಆಗಬೇಕು, ಹೊಗಳಬೇಕು ಎಂದು ಬಯಸುವವರು ಸಲೂನ್‌ನತ್ತ ಮುಖ ಮಾಡುವ ಪ್ರತಿ ಬಾರಿಯೂ ಟ್ರೆಂಡಿ ಲುಕ್ ಬಯಸುತ್ತಾರೆ. ತಲೆಗೂದಲಿಗೆ ತರಹೇವಾರಿ ರೀತಿ ಕತ್ತರಿ ಹಾಕಿಸಲು ಜೇಬಿಗೂ ಹೆಚ್ಚು ಕತ್ತರಿ ಬೀಳುತ್ತದೆ.

ಟ್ರೆಂಡಿ ಲುಕ್ ನೀಡುವ ಹಲವು ಹೇರ್‌ಸ್ಟೈಲ್ ವಿಧಾನಗಳು ಯಾವುವು?

### ಫೇಡ್ ಕಟ್

ನಗರ ಪ್ರದೇಶಗಳಲ್ಲಿನ ಸಾಕಷ್ಟು ಮಂದಿ ಪಡ್ಡೆಹೈಕಳು ಫೇಡ್ ಕಟ್‌ಗೆ ಅಂಟಿಕೊಂಡಿದ್ದಾರೆ. ಇಳಿಜಾರಿನಂತೆ ಮೊನಚಾಗಿ ಕಾಣುವ ಈ ವಿಧಾನವು ತುಂಬಾ ಸ್ಮಾರ್ಟ್ ಲುಕ್ ಅನ್ನು ಒದಗಿಸುತ್ತದೆ. ಫೇಡ್ ಕಟ್‌ನಲ್ಲಿ ಹೈ ಫೇಡ್, ಮೀಡಿಯಂ ಫೇಡ್ ಅಥವಾ ಲೋ ಫೇಡ್ ಆಯ್ಕೆಗಳಿವೆ. ಈ ಪ್ರತಿ ಆಯ್ಕೆಗಳು ಬೇರೆ ಬೇರೆ ಲುಕ್ ನೀಡುತ್ತವೆ. ಹೈ ಫೇಡ್ ಮಾಪ್‌ಟಾಪ್ ರೀತಿಯ ಲುಕ್ ನೀಡಿದರೆ, ಲೋ ಫೇಡ್ ಕಿವಿಗಳ ಸುತ್ತ ತೀರಾ ಕಡಿಮೆ ಕೂದಲು ಬಿಟ್ಟು ಇಳಿಜಾರಿನಂತೆ ಕತ್ತರಿಸಲಾಗುತ್ತದೆ. ಕಟಿಂಗ್ ಮಾಡಿಸಿದ ಮೂರರಿಂದ ನಾಲ್ಕು ದಿನಗಳವರೆಗೆ ಮಾತ್ರ ನೋಡಲು ಸ್ಟೈಲಿಶ್ ಆಗಿ ಕಾಣುವ ಈ ಶೈಲಿ ಬಳಿಕ ತನ್ನ ಛಾಪನ್ನು ಕಳೆದುಕೊಂಡು ಬಿಡುತ್ತದೆ. ಹೀಗಾಗಿ, ಸಭೆ ಸಮಾರಂಭಗಳನ್ನು ನೋಡಿಕೊಂಡು ಈ ಕೇಶವಿನ್ಯಾಸ ಮಾಡಿಸಿಕೊಳ್ಳುವುದು ಒಳಿತು.

